O.S. No- 64/2017

DW-1

<u>ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ. ಎ.ಪಿ.ಕೆ. ಪ್ರತಿವಾದಿ ಪರ ವಕೀಲರಿಂದ-**

ಮುಂದುವರಿದ ಮುಖ್ಯ ವಿಚಾರಣೆ ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟಿ ಸವಾಲುಃ ಶ್ರೀಮತಿ ಆರ್.ಆರ್.ಎಚ್. ವಾದಿ ಪರವಾಗಿ ವಕೀಲರಿಂದಃ** ನಾನು ಸೆಂಟ್ರಿಂಗ್ ಕೆಲಸ ಮಾಡುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಸೆಂಟ್ರಿಂಗ್ ಕೆಲಸ ಮಾಡುತ್ತೇನೆ ಎಂದು ಬರೆಸಿಲ್ಲ. ನನ್ನ ತಂದೆಯವರು ಬಡಿಗೆತನ ಕೆಲಸ ಮಾಡುತ್ತಾರೆ. ಆ ಕೆಲಸವನ್ನು ನಾನು ಮುಂದುವರೆಸುತ್ತಿಲ್ಲ. ನನ್ನ ತಂದೆಯವರು ಬಡಿಗೆತನದಲ್ಲಿ ಕಿಟಕಿ ಬಾಗಿಲುಗಳನ್ನು ತಯಾರಿಸುತ್ತಿದ್ದರು. ಚಕ್ಕಡಿಯನ್ನು ತಾವೇ ತಯಾರು ಮಾಡಿ ಮಾರಾಟ ಮಾಡುತ್ತಿದ್ದರು. ನಮ್ಮ ಹಿರಿಯರ ಜಮೀನು ಇಲ್ಲ. ನಾನು ಒಕ್ಕಲುತನ ಮಾಡುತ್ತೇನೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿಲ್ಲ ಎಂದರೆ ಸರಿ. ಮುಖ್ಯ ವಿಚಾರಣೆಯಲ್ಲಿ ಒಕ್ಕಲುತನ, ಬಡಿಗೆತನ ಕೆಲಸ ಮಾಡುತ್ತೇನೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರ ಬಡಿಗೆತನ ಕೆಲಸವನ್ನು ಯಾರು ಮುಂದುವರೆಸಿಕೊಂಡು ಹೋಗುತ್ತಿಲ್ಲ. ನನ್ನ ತಂದೆಯ ಮರಣಾನಂತರ ಮನೆಯ ವ್ಯವಹಾರವನ್ನೆಲ್ಲಾ ನಾನೇ ನೋಡಿಕೊಳ್ಳುತ್ತೇನೆ.

ನಾನು ಏನೇ ವ್ಯವಹಾರ ಮಾಡಿದರೂ ಮನೆಯಲ್ಲಿ ತಿಳಿಸಿ ಮಾಡುತ್ತೇನೆ ಎಂದರೆ ಸರಿ. ಮೊದಲು ನಮ್ಮ ತಂದೆಯವರು ಹೇಗೆ ಎಲ್ಲ ತಿಳಿಸಿ ವ್ಯವಹಾರ ಮಾಡುತ್ತಿದ್ದರೋ ನಾನೂ ಅದೇ ರೀತಿ ಎಲ್ಲ ತಿಳಿಸಿ ವ್ಯವಹಾರ ಮಾಡುತ್ತೇನೆ. ನಾನು, ಮಲಕಯ್ಯ ಹಿರೇಮಠ ಇವರಿಗೆ ಮನೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಂತರ ಕಾಸು ಬೈರಪ್ಪ ದಳವಾಯಿ ಇವರಿಗೂ ಒಂದು ಮನೆಯನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದ ನಂತರ ನಾನು ಎರಡು ಮನೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದರಿಂದ ಮನೆ ಜಾಗಗಳನ್ನು ತೆಗೆದುಕೊಳ್ಳುವುದು ಮಾರಾಟ ಮಾಡುವುದನ್ನು ಮಾಡುತ್ತೇನೆ ಎಂದರೆ ಸರಿಯಲ್ಲ.

(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯ ನೀಡಿ ಪಾಟಿ ಸವಾಲನ್ನು ಮುಂದೂಡಲಾಯಿತು.)

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.